

ಕಲೆ: ಜಬೀವುಲ್ಲಾ ಎಂ. ಅಸದ್

# ಓಯಸಿಸ್‌ಗಳ ಎದುರುಗೊಳ್ಳುತ್ತ...

ಸತ್ವಯುತ ಸಾಹಿತ್ಯ ಬರಹಗಾರನ ನಂತರದಲ್ಲೂ ಸಾವಿರಾರು ವರ್ಷಗಳ ಕಾಲ ಉಳಿದುಬಂದಿರುವ ಉದಾಹರಣೆಗಳು ಸಾಹಿತ್ಯ ಚರಿತ್ರೆಯಲ್ಲಿ ಸಾಕಷ್ಟಿವೆ. ಸಾಹಿತ್ಯ ಮಹತ್ವದ್ದಲ್ಲದೆ ಹೋದಾಗಲೂ ಕೆಲವು ಬರಹಗಾರರು ತಮ್ಮ ವ್ಯಕ್ತಿತ್ವದ ಕಾರಣದಿಂದ ಸಹೃದಯರ ಮನಸ್ಸುಗಳಲ್ಲಿ ಉಳಿಯುತ್ತಾರೆ. ವ್ಯಕ್ತಿತ್ವದ ಚೆಲುವಿನಿಂದ ಸಾಹಿತ್ಯ ಹೊಳಪಾಗುವುದೂ ಇದೆ. ಸಾಹಿತ್ಯ ಹಾಗೂ ವ್ಯಕ್ತಿತ್ವ ಎರಡೂ ಕಾರಣಗಳಿಂದಲೂ ಸಹೃದಯರ ಗಮನಸೆಳೆದ ಅಪರೂಪದ ವ್ಯಕ್ತಿತ್ವ ಚೆನ್ನಣ್ಣ ವಾಲೀಕಾರ ಅವರದು. ಸಾಹಿತ್ಯ ಮಾತ್ರವಲ್ಲದೆ, ಬೋಧನೆ, ಜೀವನಪ್ರೀತಿ, ಸಂಘಟನೆ ಹಾಗೂ ಚಳವಳಿಯ ಕಾರಣದಿಂದಲೂ ಚೆನ್ನಣ್ಣ ತಮ್ಮ ಸರೀಕರ ಮೇಲೆ ಬೀರಿದ ಪ್ರಭಾವ ದೊಡ್ಡದು. ಕಾವ್ಯ ಹಾಗೂ ಬದುಕನ್ನು ಅಭಿನ್ನವಾಗಿ ನೋಡುತ್ತಿದ್ದ, ಇಡೀ ಸಮಾಜವನ್ನು ಅಂತಃಕರಣದ ಕಣ್ಣುಗಳಿಂದ ನೋಡುತ್ತಿದ್ದ ಚೆನ್ನಣ್ಣನ ಕುರಿತು ದಂತಕಥೆಗಳಂಥ ಕಥೆಗಳು ಸಾಕಷ್ಟಿವೆ. ಅವರ ಶಿಷ್ಯರಲ್ಲೊಬ್ಬರಾದ ವಿಕ್ರಮ ವಿಸಾಜಿ ತಮ್ಮ ಗುರುಗಳ ಬಗ್ಗೆ ಬರೆದಿರುವ ಸುದೀರ್ಘ ಟಿಪ್ಪಣಿ ಈ ಸಂಚಿಕೆಯ ವಿಶೇಷಗಳಲ್ಲೊಂದು. ಚೆನ್ನಣ್ಣನವರ ಬದುಕು–ಬರಹದ ಹಲವು ಆಯಾಮಗಳನ್ನು ಕಟ್ಟಿಕೊಡುವಂತಿರುವ ಈ ಆರ್ದ್ರ ಬರಹ, ಬಹು ಸೊಗಸಾದ ವ್ಯಕ್ತಿಚಿತ್ರವೂ ಹೌದು. ಸ್ವಾರ್ಥದ ಮುಖವಾಡಗಳೇ ಕಣ್ಣಿಗೆ ರಾಚುವ ಸಮಾಜದಲ್ಲಿ ಚೆನ್ನಣ್ಣ ವಾಲೀಕಾರರಂಥವರು ಮಾನವೀಯತೆಯ ಓಯಸಿಸ್‌ಗಳಂತೆ ಕಾಣಿಸುತ್ತಾರೆ. ಇಂಥ ಓಯಸಿಸ್‌ಗಳನ್ನು ಮತ್ತೆ ಮತ್ತೆ ಎದುರುಗೊಳ್ಳುವುದು ಸಾಮಾಜಿಕ ಹಾಗೂ ಸಾಹಿತ್ಯಿಕ ಆರೋಗ್ಯದ ದೃಷ್ಟಿಯಿಂದ ಮುಖ್ಯವಾದುದು.

ವಿಶ್ವದ ವಿವಿಧ ದೇಶ–ಭಾಷೆಗಳ ಲೇಖಕರ ಅನುವಾದ ಸಿದ್ಧಾಂತಗಳನ್ನು ಪಾಡ್‌ಕಾಸ್ಟ್ ಮೂಲಕ ಕಲೆಹಾಕಿರುವ ಪ್ರಯತ್ನವೊಂದರ ಪರಿಚಯ ಬರಹ ಈ ಸಂಚಿಕೆಯ ಮತ್ತೊಂದು ವಿಶೇಷ. ಸಾಹಿತ್ಯ ವಿದ್ಯಾರ್ಥಿಗಳಿಗೆ ಕಮ್ಮಟದಂತೆ ಉಪಯುಕ್ತವೆನ್ನಿಸಬಲ್ಲ ಈ ‘ಪಾಡ್‌ಕಾಸ್ಟ್ ಪರಪಂಚ’ ಸಾಹಿತ್ಯ ಚಿಂತನೆಗಳ ಸಂವಹನಕ್ಕೆ ತಂತ್ರಜ್ಞಾನದ ಬಳಕೆಯ ಸಾಧ್ಯತೆಗಳ ಬಗ್ಗೆ ಗಮನಸೆಳೆಯುವಂತಿದೆ.

ಮನೋವಿಕಾಸದೊಂದಿಗೆ ಮನರಂಜನೆಯ ಎಳೆಗಳನ್ನೂ ಹೊಂದಿರುವ ಪ್ರಬಂಧ, ಕಥೆ, ಕವಿತೆಗಳನ್ನು ಒಳಗೊಂಡಿರುವ ಈ ಸಂಚಿಕೆ ನಿಮಗೆ ಇಷ್ಟವಾಗುವ ನಂಬಿಕೆ ನಮ್ಮದು.

**ಮಯೂರ ಬಳಗ**

**editormy@mayura.co.in**